ದಿನಾಂಕ 14-09-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿಗಳ ಪರ ಶ್ರೀ ಆರ್.ವಿ.ಡಬ್ಲ್ಯೂ ವಕೀಲರಿಂದಃ**

1. ಈ ದಾವೆಯನ್ನು ಸ ನಂಃ 167/1 ರ ಜಮೀನಿಗೆ ಸಂಬಂಧಿಸಿದಂತೆ ಸಲ್ಲಿಸಲಾಗಿದೆ. ದಾವಾ ಆಸ್ತಿಯು ಸದರಿ ಜಮೀನಿನ 4 ಗುಂಟೆಗೆ ಸಂಬಂಧಿಸಿದ್ದು ಇರುತ್ತದೆ. ನನಗೆ ಓದಲು ಬರುತ್ತದೆ. ಈ ದಾವೆಯನ್ನು ಮಧು ಕುಬೇರಪ್ಪ ನಾಗೋಜಿ ರವರು ಸಲ್ಲಿಸಿದ್ದಾರೆ. ದಾವಾ ಆಸ್ತಿಗೆ ಸಂಬಂಧಿಸಿದ ಪಹಣಿ ಪತ್ರಿಕೆಯಲ್ಲಿ 5 ನೇ ವಾದಿಯ ಹೆಸರು ನಮೂದು ಇರುವುದಿಲ್ಲ. ಸ.ನಂಃ 167/1 ರ ಜಮೀನು 5 ನೇ ವಾದಿಯ ಹೆಸರಿನಲ್ಲಿ ಇರುವುದಿಲ್ಲ. ದಾವಾ ಆಸ್ತಿಯು 1 ನೇ ಪ್ರತಿವಾದಿಗೆ ಸೇರಿದ ಮಾಲೀಕತ್ವದ ಜಮೀನು ಎಂದರೆ ಸರಿ. ದಾವಾ ಆಸ್ತಿಯು 1987 ರಲ್ಲಿ ಆದ ಹಿಸ್ಸೇಯ ಪ್ರಕಾರ 1 ನೇ ಪ್ರತಿವಾದಿಯ ಹಿಸ್ಸೇಗೆ ಬಂದಿರುತ್ತದೆ ಎಂದರೆ ಸರಿ. ಸದರಿ ಹಿಸ್ಸೇಯಲ್ಲಿ ದಾವಾ ಆಸ್ತಿಯು 5 ನೇ ವಾದಿಯ ಹಿಸ್ಸೇಗೆ ಬಂದಿಲ್ಲ ಎಂದರೆ ಸರಿ. 5 ನೇ ವಾದಿಯ ತಂದೆಯು ಸಹ ಸದರಿ ಹಿಸ್ಸೇಯಲ್ಲಿ ಇದ್ದರು ಎಂದರೆ ಸರಿ. ದಾವಾ ಆಸ್ತಿಯು ಸಂಪೂರ್ಣವಾಗಿ ಸುಭಾಷ್ ರವರ ಹಿಸ್ಸೇಗೆ ಸೇರಿದ ಜಮೀನು ಎಂದರೆ ಸರಿ. ದಾವಾ ಆಸ್ತಿಯು 1 ನೇ ಪ್ರತಿವಾದಿಯ ಹಿಸ್ಸೇಗೆ ಬಂದಿರುವುದರಿಂದ ಅದರ ಮೇಲೆ ಆತನ ಸಹೋದರರಿಗೆ ಮತ್ತು ಇತರರಿಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

2. ದಾವಾ ಆಸ್ತಿಯಲ್ಲಿ ವಾದಿಗಳಿಗೂ ಸಹ ಹಕ್ಕು ಇರುತ್ತದೆ. ದಾವಾ ಆಸ್ತಿಯು ಮೊದಲಿಗೆ ಯಲ್ಲಪ್ಪ ನಾಗೋಜಿ ರವರ ಆಸ್ತಿಯಾಗಿದ್ದು ಆ ಕಾರಣಕ್ಕೆ ವಾದಿಯರಿಗೆ ದಾವಾ ಆಸ್ತಿಯ ಮೇಲೆ ಹಕ್ಕು ಇರುತ್ತದೆ. ದಾವಾ ಆಸ್ತಿಯು 1 ನೇ ಪ್ರತಿವಾದಿಗೆ ಹಿಸ್ಸೇಯಲ್ಲಿ ಬಂದಿರುವುದರಿಂದ ವಾದಿಯರಿಗೆ ಅದರ ಮೇಲೆ ಯಾವುದೇ ರೀತಿಯ ಹಕ್ಕು ಮತ್ತು

ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಕೆಲಸ ಮಾಡುವಂತೆ 5 ನೇ ವಾದಿಯು ಕೇಳಿದ್ದರಿಂದ ನಾನು ಕೆಲಸ ಮಾಡಿರುತ್ತೇನೆ. ನನಗೆ 5 ನೇ ವಾದಿಯು ಆಪ್ತನು ಇರುತ್ತಾನೆ ಎಂದರೆ ಸರಿ. ನನಗೂ ಮತ್ತು 1 ನೇ ಪ್ರತಿವಾದಿಗೂ ಸಂಪರ್ಕ ಇಲ್ಲ ಎಂದರೆ ಸರಿ.

3. ಈ ದಾವೆಯಲ್ಲಿ 2 ನೇ ಪ್ರತಿವಾದಿಯ ವಿರುದ್ದ ವಾದಿಯರು ಯಾವುದೇ ಪರಿಹಾರವನ್ನು ಕೋರಿರುವುದಿಲ್ಲ. ವಾದಿಗಳು 2 ನೇ ಪ್ರತಿವಾದಿಯ ವಿರುದ್ದ ಯಾವುದೇ ಪರಿಹಾರವನ್ನು ಕೋರದೇ ಇದ್ದರೂ, ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಆತನು ಸಹ ದಾವಾ ಆಸ್ತಿಯನ್ನು ವಹಿವಾಟು ಮಾಡಲು ತೊಂದರೆ ನೀಡಿರುತ್ತಾನೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಯರು ಮೊದಲಿನಿಂದಲೂ ದಾವಾ ಆಸ್ತಿಯನ್ನು ವಹಿವಾಟು ಮಾಡುತ್ತಿದ್ದು, 1 ನೇ ಪ್ರತಿವಾದಿಯು ಕೆ.ಎಸ್.ಆರ್.ಟಿ.ಸಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ಅದನ್ನು ಆತನು ವಹಿವಾಟು ಮಾಡಲು ಆಗದೇ ಇರುವ ಕಾರಣಕ್ಕೆ ವಾದಿಗಳು ಆತನಿಂದ ದಾವಾ ಆಸ್ತಿಯನ್ನು ಲಾವಣಿ ಪಡೆದುಕೊಂಡು ವಹಿವಾಟು ಮಾಡುತ್ತಿದ್ದರು. ಸದರಿ ಲಾವಣಿ ವ್ಯವಹಾರದಲ್ಲಿ ನಾನು ಭಾಗವಹಿಸಿರುವು ದಿಲ್ಲ.

4. ದಾವಾ ಆಸ್ತಿಯ ಚಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯ ಚಕ್ಕುಬಂದಿಗಳನ್ನು ಬರೆಸಿರುತ್ತೇನೆ. ದಾವಾ ಆಸ್ತಿಯ ಪೂ-ಪುಂಡಲೀಕ ಚಿಕ್ಕಣಕಿ ರವರ ಜಮೀನು, ಪ-ಪರಸಪ್ಪ ನಾಗೋಜಿ, ಕುಬೇರಪ್ಪ ನಾಗೋಜಿ, ಪರಶುರಾಮ ನಾಗೋಜಿ ರವರ ಜಮೀನು, ಉ- ಪುಂಡಲೀಕ ಚಿಕ್ಕಣಕಿ ರವರ ಜಮೀನು ಮತ್ತು ದ-ರಸ್ತೆ ಇದೆ. ವಾದಿಯರೊಂದಿಗೆ ನಾನು ವಿಶ್ವಾಸದಿಂದ ಇರುವುದರಿಂದ ದಾವಾ ಆಸ್ತಿಯನ್ನು ಅವರಿಗೆ ಪ್ರಾಪ್ತವಾಗಲು ಅನುಕೂಲ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ಎಂದಿಗೂ ದಾವಾ ಆಸ್ತಿಯ

ವಹಿವಾಟು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಇಂದಿಗೂ 1 ನೇ ಪ್ರತಿವಾದಿಯು ಪ್ರತ್ಯಕ್ಷ ಕಬ್ಜೆಯಲ್ಲಿ ಇಟ್ಟುಕೊಂಡು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ, 1 ನೇ ವಾದಿ, 3 ರಿಂದ 6 ನೇ ವಾದಿಗಳು ಅಣ್ಣ ತಮ್ಮಂದಿರು ಎಂದರೆ ಸರಿ. ಅವರಿಗೆ ಸಮಸ್ಯೆಗಳು ಆದಾಗ ಒಬ್ಬರಿಗೊಬ್ಬರು ಸಹಾಯ ಮಾಡುತ್ತಾರೆ ಎಂದರೆ ಸರಿ. ವಾದಿಗಳು ನನಗೆ ಸಹಾಯ ಮಾಡುತ್ತಿರುವುದರಿಂದ ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ